ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ, "ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ-1995ನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪವು ಅಂಗೀಕರಿಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ-1995ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ

ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಅರ್ಬನ್)(ತಿದ್ದುಪಡಿ) ವಿಧೇಯಕ

(ಪರ್ಯಾಲೋಚನ ಪ್ರಸ್ತಾಪ)

ಶ್ರೀ ಜೆ.ಹೆಚ್, ಪಟೇಲ್ : (ಉಪ ಮುಖ್ಯಮಂತ್ರಿಯವರು) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಪವನ್ನು ಮಂಡಿಸಲಾಯಿತು

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ,

ಈ ವಿಧೇಯಕದ ಉದ್ದೇಶ ಏನೆಂದರೆ ಕರ್ನಾಟಕ ಎಲೆಕ್ಟ್ರಿಸಿಟಿ ಆಕ್ಟ್ (ಅಕ್ವಿಸಿಷನ್) ಭಾಗದಲ್ಲಿ ಹಿಂದೆ ಸಣ್ಣ ಸಣ್ಣ ಥರ್ಮಲ್ ಪವರ್ ಸ್ಟೇಶನ್ನನ್ನು ಅಕ್ವಾಯರ್ ಮಾಡಿಕೊಂಡಾಗ ಈ ಕಾನೂನು ಇರಲಿಲ್ಲ. ದೆಹಲಿಯ ಕೋರ್ಟ್‌ನ ಒಂದು ಕೇಸ್‌ನಲ್ಲಿ ಮತ್ತು ಇಲ್ಲಿನ ಹೈಕೋರ್ಟ್‌ನಲ್ಲಿ ಕೂಡ ಇದರ ಬಗ್ಗೆ ವಿವಾದ ಇದೆ. ಯಾರು ಆ ವಿದ್ಯುತ್ ಘಟಕಗಳನ್ನು ನಡೆಸುತ್ತೀರೋ, ಅವರನ್ನು ಕರೆದು ಅವರೊಂದಿಗೆ ಮಾತನಾಡಿ ಅವರುಗಳಿಗೆ ಪರಿಹಾರ ಕೊಡಲು ಅದರಲ್ಲಿ ಅವಕಾಶವಿರಲಿಲ್ಲ. ಅದ್ದರಿಂದ ನಮಗೆ ಆ ಕೆಲಸವನ್ನು ಮಾಡಲು ಆಗಲಿಲ್ಲ. ಅದಕಾರಣ ಅವರು ಕೋರ್ಟ್‌ಗೆ ಹೋದರು. ಆದ್ದರಿಂದ ಈ ತೊಂದರೆಗಳನ್ನು ನಿವಾರಣೆ ಮಾಡಲು ಕೋರ್ಟ್‌ಗೆ ಹೋಗುವುದಕ್ಕಿಂತ ಮುಂದೆ ಅದನ್ನು ಪರಿಹರಿಸಿಕೊಳ್ಳಲು ಅವಕಾಶ ಆಗಲಿ ಎಂದು ಈ ತಿದ್ದುಪಡಿಯನ್ನು ತಂದಿದ್ದೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ, "ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಅರ್ಜನ್) (ತಿದ್ದುಪಡಿ) ವಿಧೇಯಕ-ವನ್ನು ಪರ್ಯಾಲೋಚಿಸುವುದು."

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಉಪಾಧ್ಯಕ್ಷರು : "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ,"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಉಪಾಧ್ಯಕ್ಷರು : ಮಾನ್ಯ ಸಚಿವರು ಪ್ರಸ್ತಾವನೆಯನ್ನು ಮಂಡಿಸಬಹುದು.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನಮಗೆ ಬಿಲ್‌ನ ಪ್ರತಿಗಳನ್ನು ಮೊದಲೇ ಓದಗಿಸುವುದು ಬೇಡವೇ? ಇಲ್ಲಿ ತಂದು ಕೊಟ್ಟರೆ ನಾವು ಅದನ್ನು ಓದುವುದು ಬೇಡವೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಬಿಲ್‌ನ ಪ್ರತಿಗಳನ್ನು ಮೊದಲೇ ನಾವು ಇವೊತ್ತಿನವರೆಗೂ ಪಡೆದಿಲ್ಲ. ಈಗ ಇಲ್ಲಿ ಬಂದು ಕೊಡುತ್ತಿದ್ದಾರೆ. ನಾವು ಅದನ್ನು ಓದಿ ನೋಡಿ ನಮ್ಮ ಅಭಿಪ್ರಾಯಗಳನ್ನು ಹೇಳುವುದು ಬೇಡವೆ?

ಉಪಾಧ್ಯಕ್ಷರು : ನಮ್ಮ ಕಚೇರಿಯಿಂದ ಸಂಬಂಧಪಟ್ಟ ಕಾಗದ ಪತ್ರಗಳನ್ನು ಕವರ್‌ನಲ್ಲಿ ಹಾಕಿ ಕಳುಹಿಸಿ ಕೊಟ್ಟಿದ್ದೇವೆ. ನಿನ್ನೆ ಬಿಎಸಿಯಲ್ಲಿ ಕಲಾಪಗಳ ಬಗ್ಗೆ ತೀರ್ಮಾನವಾಗಿದೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಭಿನ್ನವಿಸಿಕೊಳ್ಳುವುದೇನೆಂದರೆ ಪ್ರತಿದಿವಸವೂ ಸದನದಲ್ಲಿ ಏನೇನು ಕಲಾಪಗಳು ನಡೆಯುತ್ತವೆ ಎಂಬ ಬಗ್ಗೆ ಅವರಿಗೆ ಲಕೋಟೆಯಲ್ಲಿ ಹೋಗಿರುತ್ತದೆ. ಅದನ್ನು ತಾವುಗಳು ಪ್ರತಿದಿನವೂ ತೆಗೆದು ಓದಿ ನೋಡುವ ಪರಿಪಾಠವನ್ನು ಇಟ್ಟುಕೊಳ್ಳಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ನಿಮಗೆ ಸಂಬಂಧಪಟ್ಟ ಬಿಲ್‌ನ ಪ್ರತಿಗಳನ್ನು ನಿನ್ನೆ ಕವರ್‌ನೊಳಗೆ ಹಾಕಿ ತಲುಪಿಸಿದ್ದಾರೆ. ಈಗ ತಾವುಗಳು ಈ ವಿಚಾರದಲ್ಲಿ ಅಬ್‌ಜಕ್ಷನ್ ರೈಸ್ ಮಾಡುವ ಸಂದರ್ಭವಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬಿಲ್‌ನ್ನು ಪಾಸ್ ಮಾಡುವುದಕ್ಕಿಂತ ಮುಂದೆ ಅದು ಸದನದಲ್ಲಿ ಚರ್ಚೆಗೆ ಒಳಪಡಬೇಕೆಂಬುದನ್ನು ಮಾನ್ಯ ಉಪ್ಯಮುಖ್ಯ ಮಂತ್ರಿಯವರು ಕೂಡ ಒಪ್ಪುತ್ತಾರೆಂದು ನಂಬಿದ್ದೇನೆ. ನಾವು ಅದನ್ನು ಇಲ್ಲಿ ಡಿಸ್‌ಕಶನ್ ಮಾಡಬೇಕೋ ಬೇಡವೋ? ಈಗ ನೀವು ಇಲ್ಲಿ ಬಿಲ್ ಇಟ್ಟು ಪಾಸ್ ಆಯಿತು ಅಂದರೆ ನಾವು ಇಲ್ಲಿ ಏನು ಮಾಡಬೇಕು?

ಉಪಾಧ್ಯಕ್ಷರು : ಶ್ರೀಮತಿ ಪ್ರಮೀಳಾರವರೇ, ತಾವು ಬಿಎಸಿಯಲ್ಲಿ ಇಲ್ಲ. ಅಲ್ಲಿ ನಡೆದಂಥ ತೀರ್ಮಾನದ ಪ್ರಕಾರವೇ ನಾವು ಕಲಾಪಗಳನ್ನು ನಡೆಸಬೇಕಾಗುತ್ತದೆ. ಅದಕ್ಕೆ ತಮ್ಮ ಸಹಕಾರ ಇರಲಿ. ನಿಮ್ಮ ಹಕ್ಕನ್ನು ನಾವು ಕರ್ಬ್ ಮಾಡುವುದಿಲ್ಲ, ಅದನ್ನು ನಾವು ರಕ್ಷಣೆ ಮಾಡುತ್ತೇವೆ. ಅದರೆ ನಾವು ಇಲ್ಲಿ ಕೆಲವೊಂದು ನಿಯಮಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ನಿನ್ನೆ ನಿಮಗೆ ಬಿಲ್‌ನ ಪ್ರತಿಗಳನ್ನು ಕಳುಹಿಸಿಕೊಟ್ಟಿದ್ದಾರೆ.

Sri J.H. Patel : What is there for discusion in this? The High Court of Karnataka in their Order in Writ Petition No. 67/74 struck down the Karnataka Electricity Supply Undertakings Acquisition Act of 1974 on the ground that

the Act was unworkable as it did not provide for some machinery or adjudicate the forum for resolution of dispute arising from the Act particularly Sections 5,6 and 7. The matter is now pending before the Supreme Court in Civil Appeal No...../74 of 1982 and likely to be listed for final hearing shorly. Therefore, it is considered necessary to amend the Act to provide for making application to the Tribunal constituted under Section 12 in respect of disputes, arising from Sections 5,6 and 7. What is there to discuss about?

12.20 ಪಿ.ಎಂ.

ಪ್ರಸ್ತಾವನೆ ಅಂಗೀಕಾರ

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ವಿಧೇಯಕವನ್ನು ಅಂಗೀಕರಿಸಲು ಕೋರುತ್ತೇನೆ.

ಅಧ್ಯಕ್ಷರು : 1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಅರ್ಜನ್) ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1995

(ಪರ್ಯಾಲೋಚನೆ ಪ್ರಸ್ತಾಪ)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಅಧ್ಯಕ್ಷರೇ, 1995ರ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈಗಾಗಲೇ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸುವ ಸಂದರ್ಭದಲ್ಲಿ ಒಂದು ಸುಗ್ರೀವಾಜ್ಞೆ ಹೊರಡಿಸಿ ಹಿಂದುಳಿದ ಜನಾಂಗಗಳು ಯಾವುವು ಎಂದು ಪಟ್ಟಿಯನ್ನು ಗುರುತಿಸಿ ಅದಕ್ಕೆ (ಅ) ವರ್ಗ ಮತ್ತು (ಬಿ) ವರ್ಗ ಎಂದು ಎರಡು ಪ್ರಭೇದ ಮಾಡಿ (ಅ) ವರ್ಗದವರಿಗೆ ಶೇಕಡ 80 ರಷ್ಟು ಮೀಸಲಾತಿ ಮತ್ತು (ಬಿ) ವರ್ಗದವರಿಗೆ ಶೇಕಡ 20 ರಷ್ಟು ಮೀಸಲಾತಿ ತಂದಿದ್ದೆವು ಅದರ ಪ್ರಕಾರ ಈಗಾಗಲೇ ಚುನಾವಣೆ ಆಗಿದೆ. ಆ ಕಾರಣಕ್ಕಾಗಿ ಇದನ್ನು ಈ ಸದನ ಒಪ್ಪಿಕೊಳ್ಳಬೇಕು, ಆ ಸುಗ್ರೀವಾಜ್ಞೆ ಬದಲು ಈಗ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೇವೆ. ಮತ್ತೆ ಮಾನ್ಯ ಉಪಾಧ್ಯಕ್ಷರೇ ಒಂದು ಸಣ್ಣ ಮುದ್ರಣದ ದೋಷವಾಗಿದೆ, ಇದರಲ್ಲಿ (ಅ) ವರ್ಗದಲ್ಲಿ ಅಕಸ್ಮಾತ್ ಸಿಗದೇ ಹೋದಾಗ (ಬಿ) ವರ್ಗದಿಂದಿರುವವರನ್ನು ಪದಾಧಿಕಾರಿಗಳನ್ನು ಮಾಡಬಹುದು ಅಥವಾ (ಬಿ) ವರ್ಗದಲ್ಲಿರುವಂಥವರನ್ನು (ಅ) ವರ್ಗದಲ್ಲಿ ಮಾಡಬಹುದೆಂದು ಇಂಗ್ಲೀಷಿನ ವಿಧೇಯಕದಲ್ಲಿ ಸೆಷನ್4ರ ಕೆಳಗೆ ಕಾಣಿಸಿದೆ.

"provided further that if no person falling under category 'A' is available, the offices reserved for that category shall also be filled by the persons falling under category "B" and vice versa."